CAREERINDIA

# KANNADA CODE NO. 115
# CLASS XII : (APRIL 2018 – MARCH 2019)
# SAMPLE QUESTION PAPER
# SUBJECT : KANNADA 2018 – 19

**TIME : 3 HOURS** **MARKS : 100**

---

**ಸೂಚನೆಗಳು : 1. ಈ ಪ್ರಶ್ನೆ ಪತ್ರಿಕೆಯು ಎ, ಬಿ, ಸಿ ಮತ್ತು ಡಿ ಎಂಬ ನಾಲ್ಕು ಭಾಗಗಳನ್ನೊಳಗೊಂಡಿರುತ್ತದೆ.**

- **ವಿಭಾಗ – ಎ (ವ್ಯಾಕರಣ) 25 ಅಂಕಗಳು**
- **ವಿಭಾಗ – ಬಿ (ಅರ್ಥ ಗ್ರಹಿಕೆ) 10 ಅಂಕಗಳು**
- **ವಿಭಾಗ – ಸಿ (ಬರವಣಿಗೆ) 15 ಅಂಕಗಳು**
- **ವಿಭಾಗ – ಡಿ (ಪಠ್ಯಗಳ ಅಧ್ಯಯನ) 50 ಅಂಕಗಳು**

---

## Section – A Grammar : 25 Marks

### ವಿಭಾಗ – ಎ (ವ್ಯಾಕರಣ) : 25 ಅಂಕಗಳು

**ಪ್ರಶ್ನೆ 1. ಅ) ಕೆಳಗಿನ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ.** **1**

ರಾಮನು ಪೇಟೆಗೆ ಹೋದನು.

**ಆ) ಕೆಳಗಿನ ವಾಕ್ಯವನ್ನು ನಿಷೇಧಾರ್ಥದಲ್ಲಿ ಬಳಸಿ.** **1**

ಬಸವಣ್ಣನವರು ಕಲ್ಯಾಣದಲ್ಲಿ ಕ್ರಾಂತಿ ಮಾಡಿದರು.

**ಇ) ಕೆಳಗಿನ ವಾಕ್ಯವನ್ನು ಸಾಮಾನ್ಯ ವಾಕ್ಯಗಳನ್ನಾಗಿ ಪರಿವರ್ತಿಸಿ.** **2**

ರಮೇಶನು ತನ್ನ ಗೆಳೆಯ ಮಹೇಶನನ್ನು ನೋಡಲು ಹೋದರೂ ಆತ ಅವನಿಗೆ ಸಿಗಲಿಲ್ಲ.

**ಈ) ಕೆಳಗಿನ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿ.** **1**

ಕುಮಾರನು ಓಟದ ಪಂದ್ಯದಲ್ಲಿ ಓಡುತ್ತಿದ್ದಾನೆ.

**ಉ) ಕೆಳಗಿನ ವಾಕ್ಯದಲ್ಲಿರುವ ಕ್ರಿಯಾಪದದ ಧಾತುವನ್ನು ತಿಳಿಸಿ.** **1**

ನಮ್ಮ ದೇಹವನ್ನು ಹಿಡಿದಿಡಬಹುದಾದರೂ ಮನಸ್ಸನ್ನು ಕಟ್ಟಿಹಾಕಲಾಗುವುದಿಲ್ಲ.

**ಪ್ರಶ್ನೆ 2. ಕೆಳಗಿನ ಗದ್ಯಾಂಶವನ್ನು ಕನ್ನಡಕ್ಕೆ ರೂಪಾಂತರಿಸಿ.** **5**

Self dependancy is verymuch needed to all, especially developing countries like India, it is a must. We are depending on other countries a lot for technology, employment, financial matters etc. India took thousands of crores of rupees loan from other countries which affects our economic condition. We are paying crores together as interest for the loan we have taken. As an effect, people has to bear the burden of loan. If the same interest is used towards developmental works, India would have been improved a lot by this time. Now Indian Government has started "Make in India" programme to stop depending on other nations. Offcourse it is a good programme if effectively brought into action. It generates employment to youth. Brain drain can be stopped. But the thing is that people should understand

www.careerindia.com

the purpose of Govt. properly and act accordingly. Then only this may be succeeded.

– 1 –

**ಪ್ರಶ್ನೆ 3. ಕೆಳಗಿನವುಗಳಲ್ಲಿ ಬೇಕಾದ ಎರಡಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸಿನ ಹೆಸರು ತಿಳಿಸಿ** **2½ x 2=5**

1. ಕದಡಿದ ಸಲಿಲಂ ತಿಳಿವಂ
   ದದೆ ತನ್ನಿಂ ತಾನೆ ತಿಳಿದ ದಶವದನಂಗಾ
2. ಇನ್ನು ಹುಟ್ಟದೆಯಿರಲಿ ನಾರಿಯ
   ರೆನ್ನವೊಲು ಭಂಗಿತರು ಭುವನದೊ
   ಳಿನ್ನು ಜನಿಸಲುಬೇಡ ಗಂಡರು ಭೀಮಸನ್ನಿಭರು
3. ಅರೆಯಂ ಸೀಳುವೊಡಾನೆ ಮೆಟ್ಟಲಹುದೇ ಚಾಣಂಗಳಿದಲ್ಲದೇ

**ಪ್ರಶ್ನೆ 4. ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ.** **4x1=4**

1. ಅಟ್ಟಕ್ಕೆ ನೆಗೆದು ಆಗಸಕೆ ನೆಗೆ.
2. ಮೂರು ವರುಷದ ಬುದ್ಧಿ ನೂರು ವರುಷದವರೆಗೆ.
3. ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು.

**ಪ್ರಶ್ನೆ 5. ಕೆಳಗಿನ ಪ್ರಶ್ನೆಗಳಿಗೆ ನಿರ್ದೇಶಿಸಿರುವಂತೆ ಉತ್ತರಿಸಿ.** **½x4=2**

**1. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

1. ಬಾರದಿರೆನುತುಂ 2. ಆರಿಗುಸುರುವೆನಾರ 3. ಬೇಡುವೆನಕಟ 4. ಮುಖಾಂಬುಜವ

**2. ಕೆಳಗಿನವುಗಳ ವಿಭಕ್ತಿ ಪ್ರತ್ಯಯ ಬರೆಯಿರಿ.** **½x 2=1**

1. ಆಪತ್ತಿನೊಳ್ 2. ದೇವರ

**3. ಕೆಳಗಿನ ಪದಗಳ ತತ್ಸಮ ತದ್ಭವಗಳನ್ನು ಬರೆಯಿರಿ.** **1x2=2**

1. ಬೀರ 2. ಯೋಗಿ.

## Section – B - Reading Comprehension : 10 Marks

**ವಿಭಾಗ – ಬಿ : 10 ಅಂಕಗಳು**

**ಪ್ರಶ್ನೆ 6. ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

ಒಂದು ಭಾಷೆ ಸತ್ವಪೂರ್ಣವಾಗಬೇಕಾದರೆ ಅದನ್ನಾಡುವ ಜನರು ಅಭಿಮಾನಧನರೂ, ಬುದ್ಧಿಶಾಲಿಗಳೂ, ಪ್ರಯೋಗಶೀಲರೂ ಆಗಿರಬೇಕು. ನಾಲ್ಕೈದು ಶತಮಾನಗಳ ಹಿಂದೆ ಆಂಗ್ಲ ಭಾಷೆ ಯುರೋಪಿನ ಸಾಮಾನ್ಯ ಭಾಷೆಗಳಲ್ಲಿ ಒಂದಾಗಿತ್ತು. ಆದರೆ ಆಂಗ್ಲ ಜನತೆ ಸಾಹಸಜೀವಿಯಾಯಿತು, ಬುದ್ಧಿಶಾಲಿಯಾಯಿತು. ಸೂರ್ಯನು ಎಂದೂ ಮುಳುಗನೆನ್ನುವಂತಹ ವಿಸ್ತಾರವಾದ ಸಾಮ್ರಾಜ್ಯವನ್ನು ಸ್ಥಾಪಿಸಿತು. ದೇಶ ವಿದೇಶಗಳ ಭಾಷೆ ಹಾಗೂ ಸಂಸ್ಕೃತಿಯನ್ನು ಆಂಗ್ಲ ಪಂಡಿತರು ಮುಕ್ತ ಮನಸ್ಸಿನಿಂದ ಅಭ್ಯಸಿಸಿದರು. ತನ್ಮೂಲಕ ತಮ್ಮ ಭಾಷೆ ಮತ್ತು ಸಾಹಿತ್ಯವನ್ನು ಹಿಗ್ಗಿಸಿದರು ಮತ್ತು ಅರಳಿಸಿದರು. ಎಲ್ಲಕ್ಕೂ ಮೇಲಾಗಿ ಮಹಾ ಮೇಧಾವಿಗಳು ತಮ್ಮ ಆಸೆ, ಆಕಾಂಕ್ಷೆ, ವಿಚಾರ ಮುಂತಾದವುಗಳನ್ನು ಆ ಭಾಷೆಯ ಮುಖಾಂತರವೇ ಹೇಳಬೇಕೆಂಬ ಉಜ್ವಲ ಅಭಿಮಾನವುಳ್ಳವರಾಗಿದ್ದರು. ಆಂಗ್ಲ ವಿಜ್ಞಾನಿಗಳು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸಿದುದರ ಪರಿಣಾಮವಾಗಿ

www.careerindia.com

ಆಂಗ್ಲ ಭಾಷೆ ಬೆಳೆದು ಇಂದು ಪ್ರಪಂಚದ ದೊಡ್ಡ ಭಾಷೆಗಳಲ್ಲಿ ಒಂದಾಗಿದೆ. ಇದಕ್ಕೆಲ್ಲ ಆಂಗ್ಲ ಜನರ ಸಂಕಲ್ಪ, ಕೃಷಿ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ.

**– 2 –**

ಸ್ವಭಾಷೆಯನ್ನು ಪ್ರೀತಿಸಬೇಕು, ಗೌರವಿಸಬೇಕು, ಬೆಳೆಸಬೇಕು ಎಂದರೆ ಅನ್ಯಭಾಷೆಗಳನ್ನು ತಿರಸ್ಕರಿಸಬೇಕೆಂದು ಅರ್ಥವಲ್ಲ. ಭಾಷೆಗಳಲ್ಲಿ ಮೇಲು–ಕೀಳೆಂಬುದಿಲ್ಲ. ನಾಲ್ಕು ಜನ ಮಾತನಾಡುತ್ತಿದ್ದ ಭಾಷೆಗೂ ನಲವತ್ತು ಲಕ್ಷ ಜನ ಮಾತನಾಡುತ್ತಿದ್ದ ಭಾಷೆಗೂ ಸತ್ವ ಹಾಗೂ ಸತ್ಯ ದೃಷ್ಟಿಯಿಂದ ಅಂತರವೇ ಇಲ್ಲ. ಎಲ್ಲ ಭಾಷೆಗಳೂ ಅಷ್ಟೇ. ಒಬ್ಬ ತಾಯಿಯ ಗಾನದ ಶೃತಿಯಂತೆ ಎಲ್ಲಕ್ಕೂ ಅಷ್ಟೇ ಸ್ಥಾನವಿದೆ. ಇದನ್ನರಿತು ಭಾರತೀಯರಾದ ನಾವು ನೆರೆಹೊರೆಯ ಭಾಷೆಗಳನ್ನು ದ್ವೇಷಿಸದೆ, ಸ್ವಭಾಷೆಯನ್ನು ಗೌರವಿಸಿ ಪ್ರೀತಿಸಿ ಅಭಿವೃದ್ಧಿಗೊಳಿಸಿದರೆ ದೇಶದ ಸಂಸ್ಕೃತಿ ಮುಂದುವರಿಯುತ್ತದೆ.

**ಪ್ರಶ್ನೆಗಳು :**

1. ಒಂದು ಭಾಷೆ ಸತ್ವಪೂರ್ಣವಾಗಬೇಕಾದರೆ ಏನು ಮಾಡಬೇಕು? **1**
2. ಆಂಗ್ಲ ಪಂಡಿತರು ತಮ್ಮ ಭಾಷೆಯನ್ನು ಬೆಳೆಸಲು ಏನು ಮಾಡಿದರು? **1**
3. ಆಂಗ್ಲ ಭಾಷೆ ಬೆಳೆದು ಇಂದು ಪ್ರಪಂಚದ ದೊಡ್ಡ ಭಾಷೆಗಳಲ್ಲಿ ಒಂದಾಗಲು ಕಾರಣವೇನು? **2**
4. ದೇಶದ ಸಂಸ್ಕೃತಿಯನ್ನುಳಿಸಲು ಭಾರತೀಯರು ಏನು ಮಾಡಬೇಕು? **1**

**ಪ್ರಶ್ನೆ 7. ಕೆಳಗಿನ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.** **5**

ಕತ್ತೆ ಎಂದಾದರೂ ನಿನ್ನನು ಒದ್ದರೆ
ಮರಳಿ ನೀನೊದೆಯದಿರದಕೆ
ಕತ್ತೆಯು ಒದೆಯನು ಹಿಂದಿರುಗಿಸಿದರೆ
ನೋವಿನ ಬಹುಪಾಲು ನಿನಗೆ.

ಹತ್ತೆಡೆಯೊಳು ತೋಡಿ ಒಂದಡಿಯಷ್ಟನು
ಬರಲಿಲ್ಲ ನೀರೆನ್ನಬೇಡ
ಒಂದೆಡೆಯೊಳು ತೋಡು ಹತ್ತಡಿಯಷ್ಟನು
ಚಿಮ್ಮುವುದುದಕವು ನೋಡ.

ಬಂಗಾರದಂತಹ ನಾ ಕೊಟ್ಟ ದಿನವನು
ನೀ ಮಣ್ಣು ಮಾಡಿದೆಯೆಂದು
ಕೆಂಪನೆ ಮುಖ ಮಾಡಿ ನನ್ನನೆ ನೋಳ್ಪನು
ದಿನಪನು ತಾ ಪೋಗುವಂದು.

ಮಳೆಗಾಲದೊಳು ನೀ ಹಾಡುವುದಿಲ್ಲವೆ
ಕೇಳಿತು ಪಿಕವನು ಬಕವು
ಕಪ್ಪೆಗಳೊಟಗುಟ್ಟುವೆಡೆಯೊಳು ಮೌನವೆ
ಲೇಸೆಂದು ಹೇಳಿತು ಪಿಕವು.

## Section – C - Writing : 15 Marks
**ವಿಭಾಗ – ಸಿ : 15 ಅಂಕಗಳು**

**ಪ್ರಶ್ನೆ 8. ಕೆಳಗಿನ ಯಾವುದಾದರೂ ಒಂದನ್ನು ಕುರಿತು ನಿಮ್ಮ ಅನುಭವಗಳನ್ನು ಬರೆಯಿರಿ.** **5**

1. ನಿಮ್ಮ ಬದುಕಿನಲ್ಲಿ ಮರೆಯಲಾಗದ ಒಂದು ಕಹಿ ಘಟನೆ.

www.careerindia.com

CAREERINDIA

2. ನೀವು ಶಾಲೆಗೆ ಹೋದ ಮೊದಲ ದಿನ.



**ಪ್ರಶ್ನೆ 9. ನಿಮ್ಮ ಜಿಲ್ಲೆಯ ಹಾಳಾಗಿರುವ ರಸ್ತೆಗಳ ಪರಿಸ್ಥಿತಿಯ ಬಗ್ಗೆ ವಿವರಿಸುತ್ತ ಅದನ್ನು ಸರಿಪಡಿಸುವಂತೆ ಕೋರಿ ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ಒಂದು ಪತ್ರ ಬರೆಯಿರಿ.** **5**

**ಪ್ರಶ್ನೆ 10. ಕೆಳಗಿನ ಗದ್ಯಭಾಗವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ.** **5**

ಪ್ರಪಂಚದಲ್ಲಿ ಕೇವಲ ಒಂದಕ್ಕೆ ಮಾತ್ರ ಗಮನ ಕೊಟ್ಟು ಮತ್ತೊಂದಕ್ಕೆ ಗಮನ ಕೊಡದಿದ್ದರೆ ನಂತರ ದುಃಖಿಸಬೇಕಾಗುತ್ತದೆ. ಯಾವುದರಲ್ಲಿ ಗಮನವಿಡುತ್ತೇವೆಯೋ ಅದರಲ್ಲಿ ಯಶಸ್ಸನ್ನು ಕಂಡರೂ ನಾವು ಮಾತ್ರ ಅಪರಿಪೂರ್ಣರಾಗಿರುತ್ತೇವೆ. ಉದಾಹರಣೆಗೆ ಒಬ್ಬ ಕ್ರೀಡಾಪಟುವಿನ ದೇಹ ಸುಸ್ಥಿರವಾಗಿರುತ್ತದೆ. ಏಕೆಂದರೆ ಆತನ ನಿತ್ಯದ ವ್ಯಾಯಾಮದಿಂದ ಆತನ ದೇಹ ಆರೋಗ್ಯಕರವಾಗಿರುತ್ತದೆ. ಅದರೆ ಆತ ತನ್ನ ಮನಸ್ಸನ್ನು ಕೂಡ ಅರೋಗ್ಯಕರವಾಗಿಡಬೇಕಾಗುತ್ತದೆ. ಹೀಗೆ ಮಾಡದಿದ್ದರೆ ದೇಹ ಸ್ಥಿರವಾಗಿದ್ದರೂ ಮನಸ್ಸಿನ ಕಾರಣದಿಂದ ಜೀವನದಲ್ಲಿ ಆತ ಯಶಸ್ಸನ್ನು ಕಾಣಲಾರ.

ಭಾರತೀಯರಾದ ನಾವು ಆಧ್ಯಾತ್ಮದಲ್ಲಿ ಹೆಚ್ಚಿನದನ್ನು ಸಾಧಿಸಿದ್ದೇವೆ. ಆದರೆ ವ್ಯಾವಹಾರಿಕವಾಗಿ ಪರದೇಶದವರಷ್ಟು ಮುಂದುವರಿದಿಲ್ಲ. ಇದಕ್ಕೆ ಕಾರಣ ನಾವು ನಮ್ಮ ಮನಸ್ಸನ್ನು ಕೇವಲ ಆಧ್ಯಾತ್ಮದಲ್ಲಿ ಮಾತ್ರ ವಿನಿಯೋಗಿಸಿರುವುದು. ವಿಜ್ಞಾನದತ್ತ ಹೋಗಲಿಲ್ಲ. ಪರದೇಶಗಳಲ್ಲಿನ ಜನ ವ್ಯವಹಾರ ಹಾಗೂ ವಿಜ್ಞಾನದಲ್ಲಿ ಹೆಚ್ಚಿನ ಸಾಧನೆ ಮಾಡಿದರು. ಆದರೆ ಆಧ್ಯಾತ್ಮದಲ್ಲಿ ಅವರು ಹಿಂದುಳಿದರು.

ನಾವು ನಮ್ಮ ಮನಸ್ಸನ್ನು ಹಾಗೂ ದೇಹವನ್ನು ಸದೃಢವಾಗಿಟ್ಟುಕೊಳ್ಳಬೇಕು. ಋಷಿ ವಾಕ್ಯ – ಆಧ್ಯಾತ್ಮವೂ ಬೇಕು, ಜೊತೆಗೆ ವಿಜ್ಞಾನವೂ ಬೇಕು. ಇವೆರಡೂ ಸೇರಿದರೆ ಮಾತ್ರ ನಮ್ಮ ಜೀವನ ಆನಂದಮಯವಾಗುತ್ತದೆ. ಕೇವಲ ವೇದಾಂತದ ಜ್ಞಾನದಿಂದ ಮನಸ್ಸು ಶುದ್ಧವಾಗುತ್ತದೆಂದು ಕೆಲವರು ತಿಳಿದಿದ್ದಾರೆ. ಆದರೆ ಕೇವಲ ಜ್ಞಾನ ಮನಸ್ಸನ್ನು ಶುದ್ಧ ಮಾಡದು. ಶುದ್ಧತೆಯತ್ತವೂ ನಾವು ಗಮನ ಹರಿಸಬೇಕು.

## Section – D - Literature : Prose : 15 Marks

**ವಿಭಾಗ ಡಿ – (ಪಠ್ಯಗಳ ಅಧ್ಯಯನ) : ಗದ್ಯಭಾಗ : 15 ಅಂಕಗಳು**

**ಪ್ರಶ್ನೆ 11. ಕೆಳಗಿನವುಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. (ನಾಲ್ಕಕ್ಕೆ)** **1x4=4**

1. ಬಸಲಿಂಗ ಕೊನೆಗೆ ಯಾವುದರಿಂದ ಮುಕ್ತನಾಗಿದ್ದ?
2. ಕೆಂಪು ಪಟ್ಟಿಗೆ ಸೇರಿದ ಪ್ರಾಣಿ ಯಾವುದು?
3. ಸ್ಥಳೀಯ ಭಾಷೆ ಕಲಿಯದ ಅನ್ಯಭಾಷಿಕರು ಏನಾಗುತ್ತಾರೆ?
4. ಧಣಿಗಳು ಎಂದಿಗೂ ಯಾರನ್ನು ನಂಬುವುದಿಲ್ಲ?
5. ವಿಜ್ಞಾನದ ಅಡಿಪಾಯ ಯಾವುದು?

**ಪ್ರಶ್ನೆ 12. ಕೆಳಗಿನವುಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. (ಎರಡಕ್ಕೆ)** **2x2=4**

1. ಮುದ್ದಣನನ್ನು ಮನೋರಮೆ ಹೇಗೆ ಉಪಚರಿಸಿದಳು?
2. ಹಳ್ಳಿಗರ ಆಕ್ಷೇಪದ ವಿಷಯ ಯಾವುದು?
3. ಸೀತಾಳ ಬಯಕೆ, ನಂಬಿಕೆಗಳು ಹೇಗಿದ್ದವು?

**ಪ್ರಶ್ನೆ 13. ಕೆಳಗಿನ ಪ್ರಶ್ನೆಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (ಒಂದಕ್ಕೆ)** **3x1=3**

1. "ಆಪರೇಷನ್ ಆಗಬೇಕು, ಪರವಾಗಿಲ್ಲವಾ?"

www.careerindia.com

CAREERINDIA

2. "ನಮ್ಮ ಭಾಷೆಯಲ್ಲಿ ಓದಿದ್ದ ಮೈಗೆ ಹತ್ತುವುದು"



**ಪ್ರಶ್ನೆ 14. ಕೆಳಗಿನ ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. (ಒಂದಕ್ಕೆ)** **4x1=4**

1. ಬೆಳ್ಳಿಲೋಟ ಕಂಡಾಗ ಧಣಿಯಲ್ಲಿ ಆತಂಕ, ಗಾಬರಿ, ಭಯ ಉಂಟಾಗಲು ಕಾರಣವೇನು?
2. ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ. ಹೇಗೆ? ವಿವರಿಸಿರಿ.

## Section – D - Literature : Poetry : 15 Marks

**ಪದ್ಯಭಾಗ : 15 ಅಂಕಗಳು**

**ಪ್ರಶ್ನೆ 15. ಕೆಳಗಿನವುಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. (ನಾಲ್ಕಕ್ಕೆ)** **1x4=4**

1. ತನು ಯಾವಾಗ ಕರಗಬೇಕು?
2. ಪಾಂಚಾಲನಂದನೆ ಯಾರು?
3. ಹುಸಿನಿದ್ದೆ ಸಾಕು ಎಂದು ಕವಿ ಯಾರಿಗೆ ಹೇಳುತ್ತಾರೆ?
4. ಬ್ಯಾಸಗಿ ದಿವಸಕ್ಕೆ ಯಾವ ಮರ ತಂಪು?
5. ಚಿತ್ತವನ್ನು ಯಾವುದಕ್ಕೆ ಹೋಲಿಸಲಾಗಿದೆ?

**ಪ್ರಶ್ನೆ 16. ಕೆಳಗಿನವುಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. (ಎರಡಕ್ಕೆ)** **2x2=4**

1. ದುರ್ಜನರ ಕಾರ್ಯ ಯಾವ ಬಗೆಯದು?
2. ಕವಯಿತ್ರಿ ಮುಗಿಲತ್ತ ಕೈಚಾಚಿ ಏಕೆ ನಿಂತಿದ್ದಾರೆ?
3. ಮುದುಕಿಯು ಯಾರನ್ನು ಏನೆಂದು ಪ್ರಾರ್ಥಿಸುವಳು?

**ಪ್ರಶ್ನೆ 17. ಕೆಳಗಿನ ಪ್ರಶ್ನೆಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (ಒಂದಕ್ಕೆ)** **3x1=3**

1. "ಮಾನಿನಿಗಿನಿತು ದುಃಖಮಂ ಪುಟ್ಟಿಸಿದೆ".
2. "ರಸ್ತೆಯಂಚಿನಲ್ಲೇ ಕೈ ಹಿಡಿದು ನಡೆಸಿದವಳು".

**ಪ್ರಶ್ನೆ 18. ಕೆಳಗಿನ ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. (ಒಂದಕ್ಕೆ)** **4x1=4**

1. ಯಾವ ಯಾವ ಸಂಗತಿಗಳನ್ನು ಉಪೇಕ್ಷಿಸಬಾರದಾಗಿ ಸೋಮನಾಥನು ತಿಳಿಸಿದ್ದಾನೆ?
2. ಶಿಲುಬೆಗೇರಿದ ಜೀಸಸ್‌ನ ದೇಹ ಏನನ್ನು ಹೇಳುವಂತಿದೆ? ವಿವರಿಸಿ.

## Section – D - Literature : Long Prose : 12 Marks

**ದೀರ್ಘ ಗದ್ಯ (ಕೃಷ್ಣೇಗೌಡನ ಆನೆ) : 12 ಅಂಕಗಳು**

**ಪ್ರಶ್ನೆ 19. ಕೆಳಗಿನವುಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. (ಮೂರಕ್ಕೆ)** **1x3=3**

1. ನಿರೂಪಕರಿಗೆ ಯಾವ ಕೆಲಸ ಖಾಯಮ್ಮಾಗಿತ್ತು?
2. ಕೃಷ್ಣೇಗೌಡರ ಆನೆಯ ಹೆಸರೇನು?
3. ಆನೆ ಯಾರ ಅಂಗಡಿಯನ್ನು ದೂಡಿ ಬೀಳಿಸಿತು?
4. ಆನೆ ಇಲ್ಲದ್ದರಿಂದ ವೇಲಾಯುಧ ಎಲ್ಲಿ ಕೆಲಸಕ್ಕೆ ಸೇರಿದ?

**ಪ್ರಶ್ನೆ 20. ಕೆಳಗಿನ ಪ್ರಶ್ನೆಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. (ಒಂದಕ್ಕೆ)** **2x1=2**

www.careerindia.com

CAREERINDIA

1. ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾದುದೇಕೆ?
2. ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ?



**ಪ್ರಶ್ನೆ 21. ಕೆಳಗಿನ ಪ್ರಶ್ನೆಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (ಒಂದಕ್ಕೆ)** **3x1=3**

1. "ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳುಕೋ"
2. "ಕೋವಿ ಸಿಕ್ಕಿದೆ. ಆದರೆ ಹೆಣ ಸಿಗಲಿಲ್ಲ".

**ಪ್ರಶ್ನೆ 22. ಕೆಳಗಿನ ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. (ಒಂದಕ್ಕೆ)** **4x1=4**

1. ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ? ವಿವರಿಸಿ.
2. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ. ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು?

## Brief outline History of Kannada Literature : Marks 08

(Major poets and poetesses)

**ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ (ಕವಿ ಕೃತಿ ಹಿನ್ನೆಲೆಯಲ್ಲಿ) : 08 ಅಂಕಗಳು**

**ಪ್ರಶ್ನೆ 23. ಕೆಳಗಿನ ಯಾವುದಾದರೂ ಇಬ್ಬರು ಕವಿಗಳ ಕವಿ–ಕೃತಿ ಪರಿಚಯ ಮಾಡಿಕೊಡಿ.** **4x2=8**

1. ಪುಲಿಗೆರೆ ಸೋಮನಾಥ
2. ಮುದ್ದಣ
3. ಡಾ. ಹಾ. ಮಾ. ನಾಯಕ.

*******************



www.careerindia.com

CAREERINDIA



www.careerindia.com